# ಕರ್ನಾಟಕ ಸರ್ಕಾರ

**ಆಯುಕ್ತರ ಕಾರ್ಯಾಲಯ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, 4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು -18, ದೂರವಾಣಿ:26709689/ 26706775, Email: endowmentcommissioner@gmail.com.**


ಸಂಖ್ಯೆ: HRICE-ADM0ADM8/180/2024/ಇ-1426188 ದಿನಾಂಕ:-16.07.2024.

**-: ಪ್ರಕಟಣೆ :-**

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ 2011ರ ಸೆಕ್ಷನ್ 25 ರನ್ವಯ ರಾಜ್ಯದಲ್ಲಿನ 'ಎ' ಪ್ರವರ್ಗದ ಈ ಕೆಳಕಂಡ 01 ಅಧಿಸೂಚಿತ ಸಂಸ್ಥೆಗಳಿಗೆ ವ್ಯವಸ್ಥಾಪನಾ ಸಮಿತಿಯನ್ನು ರಚಿಸುವ ಕುರಿತು ಆಸಕ್ತ ಭಕ್ತಾಧಿಗಳು/ಸಾರ್ವಜನಿಕರಿಂದ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಲು ತಿಳಿಸಿ ದಿನಾಂಕ:20.02.2020, ದಿ:30.04.2020, ದಿ:02.06.2020, ದಿನಾಂಕ:21.01.2021, ದಿ:17.01.2022,19.01.2021, ಮತ್ತು 02.03.2023 ರಂದು ಪ್ರಕಟಣೆ ಹೊರಡಿಸಲಾಗಿದ್ದು, ಆದರೆ ಕೆಲವು ದೇವಾಲಯಗಳಿಗೆ ವ್ಯವಸ್ಥಾಪನಾ ಸಮಿತಿ ರಚಿಸುವಂತೆ ಕೋರಿ ಹೊಸದಾಗಿ ಹಲವಾರು ಮನವಿಗಳು ಸ್ವೀಕೃತವಾಗುತ್ತಿರುವುದರಿಂದ ಸದರಿ ದೇವಾಲಯಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ 2011ರ ಕಲಂ 25 ಅನ್ವಯ ವ್ಯವಸ್ಥಾಪನಾ ಸಮಿತಿಗಳನ್ನು ರಚಿಸಲು ಅರ್ಜಿಗಳನ್ನು ಆಹ್ವಾನಿಸಿ ಮರು ಪ್ರಕಟಣೆಯನ್ನು ಹೊರಡಿಸಬೇಕಾಗಿರುತ್ತದೆ.

| ಕ್ರ ಸಂ | ಜಿಲ್ಲೆ | ಕ್ರ ಸಂ | ದೇವಸ್ಥಾನದ ಹೆಸರು ವಿಳಾಸ |
|---|---|---|---|
| 1. | ತುಮಕೂರು | 1. | ಶ್ರೀ ಸಿದ್ದೇಶ್ವರಸ್ವಾಮಿ ದೇವಾಲಯ, ಸಿದ್ದರಬೆಟ್ಟ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ. |

ಹಾಗೂ ಈ ಕೆಳಕಂಡ 23 ದೇವಾಲಯಗಳಿಗೆ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲು ಕುರಿತು ಆಸಕ್ತ ಭಕ್ತಾಧಿಗಳು/ಸಾರ್ವಜನಿಕರಿಂದ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಲು ದಿನಾಂಕ:06.11.2023ರಂದು ಪ್ರಕಟಣೆ ಹೊರಡಿಸಲಾಗಿದ್ದು, ಸದರಿ ಪ್ರಕಟಣೆಗೆ ಸ್ಪಂದಿಸಿ ನಿಗದಿತ ಅವಧಿಯ ಒಳಗಾಗಿ ನಿರ್ದಿಷ್ಟ ಅರ್ಜಿಗಳು ಸ್ವೀಕೃತವಾಗದೇ ಇರುವ ಕಾರಣ ಈ ಕೆಳಕಂಡ 23 ದೇವಾಲಯಗಳಿಗೆ ವ್ಯವಸ್ಥಾಪನಾ ಸಮಿತಿ ರಚಿಸಲು ಸದಸ್ಯತ್ವಕ್ಕೆ ಅರ್ಜಿ ಆಹ್ವಾನಿಸಲು ಮರು ಪ್ರಕಟಣೆಯನ್ನು ಹೊರಡಿಸಲು ದಿನಾಂಕ:07.03.2024ರಂದು ನಡೆದ ರಾಜ್ಯ ಧಾರ್ಮಿಕ ಪರಿಷತ್ ಸಭೆಯ ವಿಷಯ ಸೂಚಿ 23(ಅ)ರಲ್ಲಿ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

| ಕ್ರ ಸಂ | ಜಿಲ್ಲೆ | ಕ್ರ ಸಂ | ದೇವಸ್ಥಾನದ ಹೆಸರು ವಿಳಾಸ |
|---|---|---|---|
| 1. | ಬೆಂಗಳೂರು ನಗರ | 1. | ಶ್ರೀ ಮಿಂಟೋ ಆಂಜನೇಯಸ್ವಾಮಿ ದೇವಾಲಯ ಚಾಮರಾಜ ಪೇಟೆ ಬೆಂಗಳೂರು |
| | | 2. | ಶ್ರೀ ರಾಯ ರಾಯ ಛತ್ರ, ಚಾಮರಾಜಪೇಟೆ, ಬೆಂಗಳೂರು |
| | | 3. | ಶ್ರೀ ಗುಂಡಾಂಜನೇಯ ಸ್ವಾಮಿ ದೇವಸ್ಥಾನ ಬೆಂಗಳೂರು ಉತ್ತರ ತಾಲ್ಲೂಕು ಬೆಂಗಳೂರು ನಗರ ಜಿಲ್ಲೆ |
| | | 4. | ಶ್ರೀ ವೆಂಕಟರಮಣ ಸ್ವಾಮಿ ದೇವಾಲಯ, ನಗರ್ತರಪೇಟೆ, ಬೆಂಗಳೂರು. |
| 2. | ಬಳ್ಳಾರಿ | 5. | ಶ್ರೀ ಕಟ್ಟೆ ಬಸವೇಶ್ವರಸ್ವಾಮಿ ದೇವಾಲಯ, ಎತ್ತಿನಬೂದಿಹಾಳ್ ಗ್ರಾಮ, ಬಳ್ಳಾರಿ ತಾಲ್ಲೂಕು |
| 3. | ಬೆಳಗಾವಿ | 6. | ಶ್ರೀ ಸಮಾದೇವಿ ದೇವಸ್ಥಾನ, ಸಮಾದೇವಿ ಗಲ್ಲಿ, ಬೆಳಗಾವಿ ತಾಲ್ಲೂಕು |
| 4. | ಚಿಕ್ಕಮಗಳೂರು | 7. | ಶ್ರೀ ಋಷ್ಯಶೃಂಗೇಶ್ವರಸ್ವಾಮಿ ದೇವಸ್ಥಾನ, ಕಿಗ್ಗಾ, ಶೃಂಗೇರಿ ತಾಲ್ಲೂಕು |

| | | | |
|---|---|---|---|
| 5. | ದಕ್ಷಿಣ ಕನ್ನಡ | 8. | ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಪಾಂಡೇಶ್ವರ, ಮಂಗಳೂರು ತಾಲ್ಲೂಕು |
| 6. | ಹಾಸನ | 9. | ಶ್ರೀ ನಾಗೇಶ್ವರಸ್ವಾಮಿ ದೇವಾಲಯ, ನವಿಲೆ, ಚನ್ನರಾಯಪಟ್ಟಣ ತಾಲ್ಲೂಕು |
| 7. | ಮಂಡ್ಯ | 10. | ಶ್ರೀ ಚೌಡೇಶ್ವರಿ (ಪುರದಮ್ಮ) ದೇವಾಲಯ, ಬೀಕನಹಳ್ಳಿ, ಗ್ರಾಮ, ಹಾಸನ ತಾಲ್ಲೂಕು. |
| | | 11. | ಶ್ರೀ ಡಿಂಕಾದಮ್ಮ ಮತ್ತು ಮಾರಮ್ಮ ದೇವಸ್ಥಾನ, ಡಿಂಕಾ ಪಾಂಡವಪುರ ತಾಲ್ಲೂಕು. |
| | | 12. | ಶ್ರೀ ಸೋಮೇಶ್ವರ ಮತ್ತು ಶಂಭುಲಿಂಗೇಶ್ವರ ದೇವಸ್ಥಾನ, ಸಾಸಲು, ಕೆ.ಆರ್. ಪೇಟೆ ತಾಲ್ಲೂಕು |
| | | 13. | ಶ್ರೀ ಮತ್ತಿತಾಳೇಶ್ವರ ದೇವಸ್ಥಾನ, ಕಲ್ಲುವೀರನಹಳ್ಳಿ, ಮಳವಳ್ಳಿ ತಾಲ್ಲೂಕು |
| | | 14. | ಶ್ರೀ ಗವಿರಂಗನಾಥಸ್ವಾಮಿ ದೇವಾಲಯ, ಬಿಲ್ಲೇನಹಳ್ಳಿ, ಕೆ.ಆರ್. ಪೇಟೆ ತಾಲ್ಲೂಕು |
| 8. | ಮೈಸೂರು | 15. | ಶ್ರೀ ಮಸಣಿಕಮ್ಮ ದೇವಸ್ಥಾನ, ಪಿರಿಯಾಪಟ್ಟಣ ಟೌನ್, ಪಿರಿಯಾಪಟ್ಟಣ ತಾಲ್ಲೂಕು |
| 9. | ರಾಮನಗರ | 16. | ಶ್ರೀ ರೇವಣ ಸಿದ್ದೇಶ್ವರಸ್ವಾಮಿ ದೇವಾಲಯ, ಅವ್ವೇರಹಳ್ಳಿ, ಕೈಲಾಂಚ ಹೋಬಳಿ, ರಾಮನಗರ ತಾಲ್ಲೂಕು. |
| | | 17. | ಶ್ರೀ ತಿರುಮಲೆ ರಂಗನಾಥಸ್ವಾಮಿ ದೇವಾಲಯ ಮಾಗಡಿ ಟನ್ |
| 10. | ಶಿವಮೊಗ್ಗ | 18. | ಶ್ರೀ ಮಹಾಗಣಪತಿ ದೇವಾಲಯ, ಸಾಗರ, ಸಾಗರ ತಾಲ್ಲೂಕು. |
| 11. | ತುಮಕೂರು | 19. | ಶ್ರೀ ದಂಡಿನ ಮಾರಮ್ಮ ದೇವಸ್ಥಾನ, ಮಧುಗಿರಿ ಟೌನ್, |
| | | 20. | ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ ರಜತಾದ್ರಿಪುರ, ತಿಪಟೂರು ತಾಲ್ಲೂಕು. |
| 12. | ಉಡುಪಿ | 21. | ಶ್ರೀ ಮಹಿಷಮರ್ಧಿನಿ ದೇವಾಲಯ, ಕಡಿಯಾಳಿ, ಉಡುಪಿ ತಾಲ್ಲೂಕು, |
| 13. | ಉತ್ತರ ಕನ್ನಡ | 22. | ಶ್ರೀ ಚನ್ನಪಟ್ಟಣ ಹನುಮಂತ ದೇವಸ್ಥಾನ ಸೂಸಗಡಿ ಭಟ್ಕಳ ತಾಲ್ಲೂಕು |
| | | 23. | ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಕಡವಿನಕಟ್ಟಾ, ಶಿರಾಲಿ, ಭಟ್ಕಳ |

ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ 16 ದೇವಾಲಯಗಳಿಗೆ ವ್ಯವಸ್ಥಾಪನಾ ಸಮಿತಿಯ ಅವಧಿಯು ದೇವಾಲಯದ ಹೆಸರಿನ ಮುಂದೆ ನಮೂದಿಸಿರುವ ದಿನಾಂಕಗಳಂದು ಮುಕ್ತಾಯಗೊಂಡಿರುವ/ಮುಕ್ತಾಯವಾಗಲಿರುವ ಸದರಿ ದೇವಾಲಯಗಳಿಗೆ ಕಾಯ್ದೆಯ ಸೆಕ್ಷನ್25ರನ್ವಯ ಹೊಸದಾಗಿ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲು ದಿನಾಂಕ:03.01.2024, ದಿನಾಂಕ:07.03.2024 ಮತ್ತು ದಿನಾಂಕ:24.06.2024ರಂದು ನಡೆದ ರಾಜ್ಯ ಧಾರ್ಮಿಕ ಪರಿಷತ್ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

| **ಕ್ರ ಸಂ** | **ಜಿಲ್ಲೆ** | **ಕ್ರ ಸಂ** | **ದೇವಸ್ಥಾನದ ಹೆಸರು ವಿಳಾಸ** | **ವ್ಯವಸ್ಥಾಪನಾ ಸಮಿತಿ ಅವಧಿ ಮುಕ್ತಾಯವಾದ/ ಮುಕ್ತಾಯವಾಗುವ ದಿನಾಂಕ** |
|---|---|---|---|---|
| 1. | ದಕ್ಷಿಣ ಕನ್ನಡ | 1. | ಶ್ರೀ ಮಹಾಗಣಪತಿ ದೇವಾಲಯ, ಸೌತಡ್ಕ, ಕೊಕ್ಕಡ, ಬೆಳ್ತಂಗಡಿ ತಾಲ್ಲೂಕು | 02.02.2024 |
| | | 2. | ಶ್ರೀ ನಿಟಿಲಾಕ್ಷ ಸದಾಶಿವ ದೇವಾಲಯ, ಗೊಳ್ತಮಜಲು, ಬಂಟ್ವಾಳ ತಾಲ್ಲೂಕು | 02.02.2024 |
| | | 3. | ಶ್ರೀ ಮಹಾಲಿಂಗೇಶ್ವರ ದೇವಾಲಯ, ಪುತ್ತೂರು ಟೌನ್, ಪುತ್ತೂರು ತಾಲ್ಲೂಕು, | 04.02.2024 |
| | | 4. | ಶ್ರೀ ಸೂರ್ಯನಾರಾಯಣ ದೇವಾಲಯ, ಮರೋಳಿ, ಮಂಗಳೂರು ತಾಲ್ಲೂಕು, | 22.02.2024 |

| | | | | |
|---|---|---|---|---|
| | | 5. | ಶ್ರೀ ಸುಬ್ರಹ್ಮಣ್ಯ ದೇವಾಲಯ, ಕುಕ್ಕೆ, ಸುಬ್ರಹ್ಮಣ್ಯ ಗ್ರಾಮ, ಕಡಬ ತಾಲ್ಲೂಕು | 04.03.2024 |
| | | 6. | ಶ್ರೀ ಮಂಜುನಾಥಸ್ವಾಮಿ ದೇವಾಲಯ, ಕದ್ರಿ, ಮಂಗಳೂರು ಟೌನ್, ಮಂಗಳೂರು ತಾಲ್ಲೂಕು. | 02.07.2024 |
| | | 7. | ಶ್ರೀ ಕಾರಂಜೇಶ್ವರಿ ದೇವಾಲಯ, ಕಾರಂಜಿ, ಕಾವಳ ಮುಡ್ನೂರು ಗ್ರಾಮ, ಬಂಟ್ವಾಳ ತಾಲ್ಲೂಕು. | 12.09.2024 |
| 2. | ರಾಯಚೂರು | 8. | ಶ್ರೀ ಅಂಭಾದೇವಿ ದೇವಾಲಯ, ಸೋಮಾಲಾಪುರ ಗ್ರಾಮ, ಸಿಂಧನೂರು ತಾಲ್ಲೂಕು | 08.03.2024 |
| 3. | ಮೈಸೂರು | 9. | ಶ್ರೀ ವೈದ್ಯನಾಥೇಶ್ವರ ಸ್ವಾಮಿ ದೇವಾಲಯ, ತಲಕಾಡು ಗ್ರಾಮ, ಟಿ.ನರಸೀಪುರ ತಾಲ್ಲೂಕು, | 14.04.2024. |
| 4. | ಉಡುಪಿ | 10. | ಶ್ರೀ ವಿಶ್ವೇಶ್ವರ ದೇವಾಲಯ, ಎಲ್ಲೂರು, ಕಾಪು ತಾಲ್ಲೂಕು | 24.01.2024 |
| | | 11. | ಶ್ರೀ ಹೊಸಮಾರಿಗುಡಿ ದೇವಾಲಯ, ಕಾಪು, ಕಾಪು ತಾಲ್ಲೂಕು | 02.02.2024 |
| | | 12. | ಶ್ರೀ ಅನಂತಪದ್ಮನಾಭ ದೇವಾಲಯ, ಪೆರ್ಡೂರು, ಉಡುಪಿ ತಾಲ್ಲೂಕು | 18.02.2024 |
| | | 13. | ಶ್ರೀ ಕೋಟಿಲಿಂಗೇಶ್ವರ ದೇವಾಲಯ, ಕೋಟೇಶ್ವರ, ಕುಂದಾಪುರ ತಾಲ್ಲೂಕು. | 02.07.2024 |
| 5. | ಮಂಡ್ಯ | 14. | ಶ್ರೀ ನಿಮಿಷಾಂಬ ದೇವಾಲಯ, ಗಂಜಾಂ, ಶ್ರೀ ರಂಗಪಟ್ಟಣ ತಾಲ್ಲೂಕು. | 15.07.2024 |
| 6. | ಚಿಕ್ಕಬಳ್ಳಾಪುರ | 15. | ಶ್ರೀ ಅಶ್ವಥ್‌ನಾರಾಯಣಸ್ವಾಮಿ ದೇವಾಲಯ, ವಿದುರಾಶ್ವಥ, ಗೌರಿಬಿದನೂರು ತಾಲ್ಲೂಕು. | 26.07.2024 |
| 7. | ಬೆಳಗಾವಿ | 16. | ಶ್ರೀ ರೇಣುಕಾ ಯಲ್ಲಮ್ಮ ದೇವಾಲಯ, ಯಲ್ಲಮ್ಮನ ಗುಡ್ಡ, ಸವದತ್ತಿ ತಾಲ್ಲೂಕು. | 16.09.2024 |

ರಾಜ್ಯ ಧಾರ್ಮಿಕ ಪರಿಷತ್ ಸಭೆಯ ನಿರ್ಣಯಗಳಂತೆ ಮೇಲ್ಕಂಡಂತೆ ಒಟ್ಟು 40 "ಎ" ಪ್ರವರ್ಗದ ದೇವಾಲಯಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ 2011ರ ಸೆಕ್ಷನ್ 25 ರನ್ವಯ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲು ಆಸಕ್ತ ಭಕ್ತಾಧಿಗಳಿಂದ/ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿ ಪ್ರಕಟಣೆ ಹೊರಡಿಸಲಾಗಿದೆ.

ಸದರಿ ದೇವಾಲಯಗಳ ವ್ಯವಸ್ಥಾಪನಾ ಸಮಿತಿಗೆ ಕನಿಷ್ಟ 25 ವರ್ಷಕ್ಕಿಂತ ಮೇಲ್ಪಟ್ಟ ಆಸ್ತಕ ಭಕ್ತಾಧಿಗಳು ಸದಸ್ಯತ್ವ ಕೋರಿ ಅರ್ಜಿಯನ್ನು ನಿಗಧಿ'ತ ನಮೂನೆ-1(ಬಿ)(22ನೇ ನಿಯಮ) ನಮೂನೆಯಲ್ಲಿ ಭರ್ತಿ ಮಾಡಿ, ಅರ್ಜಿಯನ್ನು ದಿನಾಂಕ:03.08.2024 ರೊಳಗಾಗಿ **"ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ,ಬೆಂಗಳೂರು-560018"** ಇಲ್ಲಿಗೆ ನೇರವಾಗಿ ಸಲ್ಲಿಸತಕ್ಕದ್ದು, ಅಂತಹ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು, ನಿಗಧಿತ ಅವಧಿಯ ನಂತರದಲ್ಲಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (ನಿಗಧಿತ ಅರ್ಜಿ ನಮೂನೆಯ ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮತ್ತು www.itms.kar.gov.in ನಲ್ಲಿ ಲಭ್ಯವಿರುತ್ತದೆ.

**ಆಯುಕ್ತರು,**
**ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು.**

# ನಮೂನೆ 1(ಬಿ)

## [22ನೇ ನಿಯಮ]

___________________ಜಿಲ್ಲೆಯ_____________ತಾಲ್ಲೂಕಿನ____________ಗ್ರಾಮದ

ಶ್ರೀ________________ದೇವಾಲಯ/ಸಂಸ್ಥೆಯ ವ್ಯವಸ್ಥಾಪನಾ ಸಮಿತಿಯ ಸದಸ್ಯತ್ವಕ್ಕಾಗಿ ಅರ್ಜಿ

ಇವರಿಗೆ
ಕಾರ್ಯದರ್ಶಿಗಳು,
ಕರ್ನಾಟಕ ಧಾರ್ಮಿಕ ಪರಿಷತ್ತು 'ಮತ್ತು ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ,
ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು –560018

ಭಾವ ಚಿತ್ರ

| | | | |
|---|---|---|---|
| 1. | ಅರ್ಜಿದಾರರ ಹೆಸರು ಮತ್ತು ಪೂರ್ಣ ವಿಳಾಸ (ಆಧಾರ ಕಾರ್ಡ ಪ್ರತಿ ಲಗತ್ತಿಸುವುದು) | : | |
| 2. | ತಂದೆಯ/ಗಂಡನ ಹೆಸರು | : | |
| 3. | ವಯಸ್ಸು ಮತ್ತು ಹುಟ್ಟಿದ ದಿನಾಂಕ | : | |
| 4. | ವಿದ್ಯಾರ್ಹತೆ | : | |
| 5. | ಧರ್ಮ/ಜಾತಿ | : | |
| 6. | ನಾಮ ನಿರ್ದೇಶನಕ್ಕಾಗಿ ಅರ್ಜಿದಾರರು ಅರ್ಜಿಯನ್ನು ಸಲ್ಲಿಸುವ ಪ್ರವರ್ಗ (ಸಾಮಾನ್ಯ/ಅ.ಜಾ/ಅ.ಬು/ಮಹಿಳೆ/ ಅರ್ಚಕ) (ಅ.ಜಾ/ಅ.ಬು ಪ್ರಕರಣಗಳಲ್ಲಿ ತಹಶೀಲ್ದಾರರು ನೀಡಿರುವ ಪ್ರಮಾಣ ಪತ್ರವನ್ನು ಲಗತ್ತಿಸುವುದು) | : | |
| 7. | ನ್ಯಾಯಾಲಯದಿಂದ ಅತನನ್ನು ಅವಿಮುಕ್ತ ದಿವಾಳಿಯೆಂದು ಘೋಷಿಸಲಾಗಿದೆಯೇ? ಅಥವಾ ಅತನು ಅನೈತಿಕ ಅಧಃ ಪತನವನ್ನು ಒಳಗೊಂಡಿರುವ ಅಪರಾಧಕ್ಕಾಗಿ ಅತನಿಗೆ ಶಿಕ್ಷೆಯನ್ನು ವಿಧಿಸಲಾಗಿದೆಯೇ? | : | |
| 8. | ಅತನು ಅಸ್ವಸ್ಥ ಚಿತ್ತನಾಗಿದ್ದಾನೆಯೇ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿಸಲಾಗಿದೆಯೇ? ಅಥವಾ ಆತನು ಕಿವುಡ ಅಥವಾ ಮೂಕನಾಗಿದ್ದಾನೆಯೇ? ಅಥವಾ ಕುಷ್ಠರೋಗ ಅಥವಾ ಯಾವುದೇ ಸಾಂಕ್ರಾಮಿಕ ಅಥವಾ ಗಂಭೀರ ಖಾಯಿಲೆಗಳಿಂದ ಬಳಲುತ್ತಿದ್ದಾನೆಯೇ? ಹಾಗಿದ್ದಲ್ಲಿ ವೈದ್ಯಕೀಯ ಅರ್ಹತಾ ಪ್ರಮಾಣ ಪತ್ರವನ್ನು ಸಲ್ಲಿಸುವುದು. | : | |

| | | | |
|---|---|---|---|
| 9. | ಅತನು ಯಾವುದೇ ಸಮಯದಲ್ಲಿ ಸಂಸ್ಥೆಯ ಹಿತಾಸಕ್ತಿಗೆ ವಿರುದ್ಧವಾಗಿ ವರ್ತಿಸಿದ್ದಾನೆಯೇ? | : | |
| 10. | ಅತನು ಅಂತಹ ಸಂಸ್ಥೆಯ (ಅರ್ಚಕತನವನ್ನು ಹೊರತುಪಡಿಸಿ) ಪದದಾರಕನಾಗಿದ್ದಾನೆಯೇ? ಅಥವಾ ಅದಕ್ಕೆ ಸಂಬಂಧಿಸಿದಂತೆ ನೌಕರನಾಗಿದ್ದಾನೆಯೇ? ಅಥವಾ ಅವರಿಂದ ಯಾವುದೇ ಸಂಸ್ಥೆಯಿಂದ ಯಾವುದೇ ವೇತನ ಅಥವಾ ಉಪಲಬ್ಧಿಗಳು ಅಥವಾ ಸವಲತ್ತುಗಳನ್ನು ಸ್ವೀಕರಿಸುತ್ತಿದ್ದಾನೆಯೇ? | : | |
| 11. | ಅರ್ಜಿದಾರನು ಯಾವುದೇ ಇತರ ಅಧಿಸೂಚಿತ ಸಂಸ್ಥೆಗಳ ವ್ಯವಸ್ಥಾಪನಾ ಸಮಿತಿಯ ಸದಸ್ಯನಾಗಿದ್ದಾನೆಯೇ? ಹಾಗಿದ್ದಲ್ಲಿ ವಿವರಗಳನ್ನು ಒದಗಿಸುವುದು | : | |
| 12. | ಧಾರ್ಮಿಕ ಕ್ಷೇತ್ರಕ್ಕೆ ಅರ್ಜಿದಾರನು ಸಲ್ಲಿಸಿದ ಸೇವೆಗಳು ಯಾವುದಾರೂ ಇದ್ದಲ್ಲಿ | : | |

ಅರ್ಜಿದಾರರ ಸಹಿ

## :ಘೋಷಣೆ:

_________________________ರವರ ಮಗನಾದ______________ಎಂಬ ನಾನು ಮೇಲೆ ಒದಗಿಸಿದ ಮಾಹಿತಿಯು ನನ್ನ ತಿಳುವಳಿಕೆಯ ಪ್ರಕಾರ ಸತ್ಯವಾಗಿದೆಯೆಂದು ಈ ಮೂಲಕ ಘೋಷಿಸುತ್ತೇನೆ ಮತ್ತು ಯಾವುದೇ ಮಾಹಿತಿಯಯ ಸತ್ಯವಲ್ಲವೆಂದು ಕಂಡು ಬಂದಲ್ಲಿ ನನ್ನನ್ನು ವ್ಯವಸ್ಥಾಪನಾ ಸಮಿತಿಯ ಸದಸ್ಯತ್ವದಿಂದ ತೆಗೆದುಹಾಕಬಹುದಾಗಿದೆ.

ದಿನಾಂಕ: ಅರ್ಜಿದಾರರ ಸಹಿ